ನಮ್ಮ ಗೃಹನಿರ್ಮಾಣಕ್ಕಾಗಿ ಹಂಪಿ ಪರಿಸರದ ಬೆಟ್ಟ ಹೊಳೆಗಳಿಂದ ಕಲ್ಲು ಮರಳು ಬಂದು ರಾಶಿ ಬೀಳತೊಡಗಿದವು. ವಾಸ್ತುಶಿಲ್ಪಿಯು ಕಲ್ಪನಾ ಚಾತುರ್ಯ ಬಳಸಿ ಬುನಾದಿಯನ್ನು ಕ್ವಾಚಬಾಚ ತೋಡಿಸಿದ್ದರಿಂದ, ಅದು ಹರಪ್ಪ, ಮೊಹೆಂಜೊದಾರೊ ಉತ್ಖನನದ ಸೈಟಿನಂತೆ ತೋರತೊಡಗಿತು. ಸೈಟಿನ ನಟ್ಟನಡುವೆ ನಿಲ್ಲಿಸಲಾದ ಭಾರೀ ಕಲ್‌ಕಂಬಗಳು ಗ್ರೀಕ್ ಬಯಲು ರಂಗಮಂದಿರದ ಅವಶೇಷವನ್ನು ನೆನಪಿಸತೊಡಗಿದವು. ಇವು ಸಾರ್ವಜನಿಕ ಕುತೂಹಲಕ್ಕೂ ಹಾಸ್ಯಕ್ಕೂ ವಸ್ತುವಾದವು. ಬಡಾವಣೆಯ ಜನ ವಾಕಿಂಗ್‌ಪಥ ಬದಲಿಸಿ ನಮ್ಮ ಸೈಟಿನ ಮಾರ್ಗವಾಗಿ ಬರಲಾರಂಭಿಸಿದರು. ಹೆಚ್ಚಿನವರು ಕ್ಷಣಕಾಲ ನಿಂತು ಇದೇನು ಹುಚ್ಚರಾಟ ಎಂಬರ್ಥದಲ್ಲಿ ಬಾಯಿ ಮೇಲೆ ಬೆರಳಿಟ್ಟುಕೊಂಡು ಮುಂದೆ ಹೋಗುವರು. ಕೆಲವರು, 'ಅಡಿಗೆ ಮನಿ ಎಲ್ಲಿ ಬರ್ತದರಿ? ಮುಂಬಾಗಿಲು ಯಾವುದು?' ಎಂದು ವಿಚಾರಿಸುತ್ತಿದ್ದರು. ಆ ಹಂತದಲ್ಲಿ ನಮಗಾದರೂ ಖಚಿತ ಉತ್ತರ ತಿಳಿದಿರಲಿಲ್ಲ. ಮತ್ತೊಬ್ಬ ಮಹಾಶಯರು ಮನೆಯ ಆಯವನ್ನು ಪರಿಶೀಲಿಸುತ್ತ, 'ಥೋಥೊ, ಮನಿ ಐಮೂಲಿ ಅದ. ಮನಿ ಓನರಗ ಕಂಟಕ ಗ್ಯಾರಂಟಿ. ಒಂದೇ ವರ್ಷದಾಗ ಆತ ಹೋಗಲಿಲ್ಲ ಅಂದರ ನನ್ನ ಹೆಸರು ಬ್ಯಾರೆ ಇಡ್ರಿ' ಎಂದು ಚಾಲೆಂಜು ಹಾಕಿದರು. ಪೈಪ್ ಹಿಡಿದು ಕ್ಯೂರಿಂಗ್ ಮಾಡುತ್ತಿದ್ದ ನಾನು ಮರೆಯಲಿದ್ದು ಕೇಳಿಸಿಕೊಂಡೆ. ಬಾನು ಹಟದಿಂದ ಮನೆ ಕಟ್ಟುತ್ತಿರುವುದರಿಂದಲೂ ಮಾತುಮಾತಿಗೆ 'ನನ್ನಮನೆ' ಎನ್ನುವುದರಿಂದಲೂ ಕಂಟಕಕ್ಕೂ ನನಗೂ ಸಂಬಂಧವಿಲ್ಲ ಎಂದು ಸುಮ್ಮನಾದೆ. ಒಬ್ಬ ಪೂಜಾರಪ್ಪನಿಗೆ ಹೊಸಗುಡಿ ಕಟ್ಟಲಾಗುತ್ತಿದೆ ಎಂಬ ಗಾಳಿಸುದ್ದಿ ಸಿಕ್ಕು, ಧಾವಂತ ಪಟ್ಟುಕೊಂಡು ಬಂದರು. ಬಿಸಿಲಲ್ಲಿ ಒಣಗಿ ಸುಟ್ಟಬದನೆಯಂತಿದ್ದ ನನ್ನನ್ನು ಕೆಲಸಗಾರನೆಂದೇ ಭಾವಿಸಿ, 'ಯಾವ ದೇವರ ಗುಡಿಯಣ್ಣ ಇದು?' ಎಂದು ಕೇಳಿದರು. 'ಹಣಮಂತದೇವರು' ಎನ್ನಲು, 'ನಮ್ಮ ಏರಿಯಾದಾಗ ಒಂದು ಇತ್ತಲ್ಲಪ್ಪೊ ಯಪ್ಪಾ. ಮತ್ಯಾಕ ಇನ್ನೊಂದು ಕಟ್ಟಸ್ತಾರಂತ?' ಎಂದು ಬೇಸರಿಸಿಕೊಂಡು ಹೋದರು. ನನ್ನ ಮಿತ್ರನೊಬ್ಬ ಹಂಪಿ ಪ್ರವಾಸ ಬಂದವನು, 'ಏ ಥೇಟ್ ಹಂಪಿ ಮಂಟಪ ನೋಡದಂಗೇ ಆಗುತ್ತಲ್ಲೊ ಇದು' ಎಂದನು. ಇಡೀ ಮನೆಯನ್ನು ಕಲ್ಲಿನಲ್ಲಿ ಕಟ್ಟಲಾಗುವುದು ಎಂದರಿತ ಒಬ್ಬ ಗೃಹಿಣಿ ತಲೆಕೆಡಿಸಿಕೊಂಡು, 'ಗ್ವಾಡೀಗೆ ಮೊಳಿ ಹೆಂಗ ಹೊಡೀತೀರಿ?' ಎಂದು ಆತಂಕದಿಂದ ವಿಚಾರಿಸಿದರು. ವಿಚಿತ್ರ ಕರು ಹುಟ್ಟಿದರೆ ನೋಡಲು ಬರುವಂತೆ ಕಟ್ಟಡ ವಿನ್ಯಾಸದ ಸುದ್ದಿ, ಕೈಕಾಲು ಮೂಡಿಸಿಕೊಂಡು ತುಂಬುಗರ್ಭಿಣಿಗೂ ತಲುಪಿತು. ಕರ್ನೂಲಿಗೆ ಕೊಟ್ಟಿದ್ದ ಆಕೆ ತನ್ನ ಚೊಚ್ಚಲ ಹೆರಿಗೆಗೆಂದು ತವರುಮನೆಗೆ ಬಂದಿದ್ದರು. ತಂದೆತಾಯಿಗಳು ಮಗಳ ಪ್ರಸವಪೂರ್ವ ಬಯಕೆಯನ್ನು ಈಡೇರಿಸಲೋಸುಗ ಎರಡೂ ರಟ್ಟೆಹಿಡಿದು ನಿಧಾನವಾಗಿ ಮುತುವರ್ಜಿಯಿಂದ ನಡೆಸಿಕೊಂಡು ಬಂದರು. ಕಟ್ಟಡ ದರ್ಶನವಾದ ಬಳಿಕವೇ ಅವಳಿಗೆ ಸುಸೂತ್ರ ಹೆರಿಗೆಯಾಯಿತು ಎಂದು ಬಾತ್ಮಿ ಸಿಕ್ಕಿತು.

ಲೋಕದ ಸ್ತುತಿ–ನಿಂದೆಗಳ ನಡುವೆ, ಉತ್ತೇಜನ–ಗೇಲಿಗಳ ಮಧ್ಯೆ ಕಾಮಗಾರಿ ಭರದಿಂದ ಸಾಗಿತು. ಅದು ಇದ್ದಬದ್ದ ರೊಕ್ಕವನ್ನು ಮಾತ್ರವಲ್ಲ, ದೈಹಿಕ ಶಕ್ತಿಯನ್ನೂ ಮಾನಸಿಕ ಚೈತನ್ಯವನ್ನೂ ಹೀರುತ್ತಿತ್ತು. ಬ್ಯಾಂಕು, ಹಾರ್ಡವೇರ್ ಅಂಗಡಿ, ಮೇಸ್ತ್ರಿಮನೆಗಳನ್ನು ಸುತ್ತುತ್ತ ಬಿಸಿಲಲ್ಲಿ ನಾವಿಬ್ಬರೂ ದಣಿದು ಹೋದೆವು. ಬೆಳಕು ಹರಿವ ಹೊತ್ತಿಗೆ ಯಾವುದಾದರೂ ಹೊಸ ಸಮಸ್ಯೆ ಸೃಷ್ಟಿಯಾಗಿ 'ತಾಕತ್ತಿದ್ದರೆ ಬಿಡಿಸು' ಎಂದು ಚಂಡಿಹಾಕಿ ಕೂತಿರುತ್ತಿತ್ತು. ಅದು ಬಿಡಿಸಲಾಗದಷ್ಟು ಗಂಟಾದಾಗ ನಾಯಿಗಳಂತೆ ಪರಚಾಡುತ್ತಿದ್ದೆವು. ಮುನಿಸಿಪಾಲಿಟಿಯಲ್ಲಿ ನಿರ್ದಿಷ್ಟ ದಾಖಲೆ ಲಂಚವಿಲ್ಲದೆ ಸಿಗುವುದಿಲ್ಲ ಎಂದು ಗೊತ್ತಾದಾಗ, ಜಗತ್ತೆಲ್ಲವೂ